ಕೆ.ಮೈಥಿಲಿಕೃಷ್ಣ, ಬೆಂಗಳೂರು
*ನಿಮ್ಮನ್ನು ಮಂತ್ರಿ ಮಾಡಿದರೆ ಯಾವ ಖಾತೆ ಬಯಸುತ್ತೀರಿ, ಯಾಕೆ?*



ಅಬಕಾರಿ ಇಲಾಖೆ. ಯಾವಾಗಲೂ ಟೈಟ್ ಷೆಡ್ಯೂಲ್ ಇರತ್ತೆ!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ
*ಕೈ ಕೆಸರಾಗದೆ ಬಾಯಿ ಮೊಸರು ಮಾಡಿಕೊಳ್ಳುವವರು ಯಾರು?*
ಸ್ಟ್ರಾ ಬಳಸಿ ಲಸ್ಸಿ ಕುಡಿಯುವವರು!

ಜಿ.ವಿ. ಪ್ರಭು, ಬೆಂಗಳೂರು
*ಗೆಳತಿ ರಾಮಿ! ನಿನ್ನನ್ನು ಪ್ರಶ್ನಿಸಲು ತಲೆ ಎಂಬುದೂ ಇರಬೇಕಾ?*
ಪರವಾಗಿಲ್ಲ, ಹೀಗೇ ಕೇಳೋ.

ಆರ್. ಮಧುಸೂದನ್, ಹಾಸನ
*ತನ್ನ ಪುಟ್ಟ ಕಂದನಿಗೆ ತುಂಟ ಕೃಷ್ಣನ ವೇಷ ಹಾಕಿ ಸಂಭ್ರಮಿಸುವ ತಾಯಿ ಆದರ್ಶ ಪುರುಷ ಶ್ರೀರಾಮನ ವೇಷವನ್ನೇಕೆ ಹಾಕುವುದಿಲ್ಲ?*
ರಾಮ ಆದರ್ಶಪುರುಷನಷ್ಟೆ, ಆದರ್ಶ ಮಗುವಲ್ಲ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಸಿನಿಮಾ ನಟಿಯರು ತಮ್ಮ ದೇಹಸಿರಿಯನ್ನು ಪ್ರದರ್ಶಿಸಿದರೂ ಅವರ ಸಂಭಾವನೆ ನಟರಿಗಿಂತ ಕಡಿಮೆ. ಏಕೆ ಸಾರ್?*



ಆ ಪ್ರದರ್ಶಿತ ದೇಹಸಿರಿಗೆ ತಗಲುವ ಮೇಕಪ್ ಖರ್ಚು ಸಂಭಾವನೆಗಿಂತ ಹೆಚ್ಚಾಗುವುದಂತೆ!

ಜಾಕೋಬ್ ಡಿಸೋಜ
*ನಂಬಿಕೆ ಕುಂಟಿದರೆ?*
ಅಪನಂಬಿಕೆ ಡ್ಯಾನ್ಸ್ ಮಾಡುತ್ತದೆ!

ವೀರೇಂದ್ರ ಎಂ. ಮೇಗೂರ, ಧಾರವಾಡ
*ಪ್ರಜಾ ಮಯೂರ - ಸುಧಾ ಅರ್ಥ ವಿವರಿಸುವಿರಾ?*
ಪ್ರಜೆಗಳು ಮಯೂರದಂತೆ ನರ್ತಿಸುತ್ತಾ ಸಂತಸದಿಂದಿರಬೇಕಾದರೆ ಸುಧಾ ಅಗತ್ಯ!

ಕಲಾವಿದ ಸೀನು, ಚಿತ್ರದುರ್ಗ
*ಬೈಸಿಕಲ್ ಓಡಿಸಲು ಕೂಡ ಡ್ರೈವಿಂಗ್ ಲೈಸೆನ್ಸ್ ಕಡ್ಡಾಯ ಮಾಡಿದರೆ... ಹೇಗೆ?*
ಹುಚ್ಚು ಅಂತಾರೆ. ನಮ್ಮಲ್ಲಿ ಬೈಸಿಕಲ್ ಇರಲಿ, ದೇಶ ನಡೆಸಕ್ಕೇ ಲೈಸೆನ್ಸ್ ಬೇಕಿಲ್ಲ!

ನವಿರವಿ, ಕೊಪ್ಪ
*ಪ್ರೀತಿಸುವ ಹುಡುಗರು ತಮ್ಮ ಹುಡುಗಿಗೆ ಗೆಜ್ಜೆಯನ್ನೇ ಯಾಕೆ ಮೊದಲು ಕೊಡುತ್ತಾರೆ?*
ಅದು ಹುಡುಗಿಯ ಕಾಲಿನ ರಿಂಗ್‌ಟೋನ್ ಆಗಿ ಕೆಲಸ ಮಾಡುತ್ತದಲ್ಲಾ...!

ಆರಿಫ್, ದಾವಣಗೆರೆ
*ಹುಡುಗಿಯರನ್ನು ಹೊಗಳಿದಾಗ ಹೂವಿನ ಮೊಗ್ಗು ಅರಳುವ ಹಾಗೆ ಮುಗುಳುನಗೆ ಬೀರುತ್ತಾರಲ್ಲಾ, ಏಕೆ?*
ಅದೇ ಹುಡುಗಿಯ ಮುಂದೆ ಮತ್ತೊಬ್ಬಳನ್ನು ಹೊಗಳಿ; ಅರಳಿದ ಹೂವು ಹಾಗೇ ಮುದುಡಿ ಕೆನ್ನೆ, ಕಣ್ಣು ರಂಗೇರುತ್ತದೆ!

ವಿ.ಹೇಮಂತಕುಮಾರ್, ಬೆಂಗಳೂರು
*ಪ್ರೀತಿ ಫೇಲ್ ಆದ ಪ್ರೇಮಿಗಳಿಗೂ, ಪೆಟ್ಟು ತಿಂದ ಪ್ರಾಣಿಗೂ ವ್ಯತ್ಯಾಸವೇನು?*
ಪೆಟ್ಟು ತಿಂದ ಪ್ರಾಣಿ ಫುಲ್ ಟೈಟ್ ಆಗಿ ತೊಟ್ಟಿಯ ಪಕ್ಕ ಕುಳಿತು ವಿರಹಗೀತೆ. ಶೋಕಗೀತೆ ಹಾಡಲ್ಲ.

ಅನಂತಪದ್ಮನಾಭ ಎಚ್.ಎಂ, ಮೈಸೂರು
*ಹುಟ್ಟಿದ ಮಕ್ಕಳು ಅಪ್ಪನೋ ಅಮ್ಮನೋ ಓದಿರುವುದರಿಂದ ಮುಂದಕ್ಕೆ ಓದು ಪ್ರಾರಂಭಿಸುವಂತಿದ್ದರೆ ಹೇಗಿರುತ್ತಿತ್ತು?*
ಆ ರೀತಿಯಲ್ಲಾದರೂ ರಾಜಕಾರಣಿಗೆ ಬೇಸಿಕ್ ಕ್ವಾಲಿಫಿಕೇಷನ್ ದೊರೆಯುತ್ತಿತ್ತು!

ಆರ್.ನಾಗರಾಜ್, ಗೊರೂರು
*ಮದುವೆಯಾಗದ ಗಂಡು ಬ್ರಹ್ಮಚಾರಿ; ಮದುವೆಯಾಗದ ಹೆಣ್ಣು...?*
ಆ ಬ್ರಹ್ಮಚಾರಿಯ ಖಡ್ಡಾ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಚುನಾವಣೆ ಬಂತೆಂದರೆ ವಿಭೀಷಣರ ಹಾವಳಿ ಅಧಿಕವಾಗುತ್ತದಲ್ಲಾ?*
ರಾಜಕಾರಣವೇ ಹಾಗೆ. ಎಲೆಕ್ಷನ್ ವೇಳೆಯಲ್ಲಿ ಪಕ್ಷಾಂತರಿ ವಿಭೀಷಣ, ಅಧಿಕಾರ ಬಂದಾಗ ನುಂಗಲು ಹತ್ತು ತಲೆಯ ರಾವಣ, ಸದನ ಸೇರಿದಾಗ ಕುಂಭಕರ್ಣ!

## ಬಹುಮಾನಿತ ಪ್ರಶ್ನೆ

ಕುಮಾರ ಚಲವಾದಿ, ಹೊಳೆನರಸಿಪುರ
*ತೊಟ್ಟ ಬಾಣಗಳನ್ನು ತೊಡುವುದಿಲ್ಲ ಎಂದ ಕರ್ಣನಿಗೆ ಬಾಣಗಳನ್ನು ಯಾರು ತಯಾರಿಸಿಕೊಡುತ್ತಿದ್ದರು?*
ಕೂರಂಬು ಸ್ಟೀಲ್ ಇಂಡಸ್ಟ್ರೀಸ್, ಹಸ್ತಿನಾಪುರ.

ಗೀತಾ ಬರ್ಲ, ಬೆಂಗಳೂರು
*ಹುಟ್ಟುತ್ತಾ ಅಣ್ಣ ತಮ್ಮಂದಿರು, ಬೆಳೆಯುತ್ತಾ ದಾಯಾದಿಗಳು ಎನ್ನುತ್ತಾರಲ್ಲಾ, ಯಾಕೆ?*
ಹುಟ್ಟಿದಾಗಲೇ ದಾಯ, ಆಯ, ಆದಾಯಗಳು ತಿಳಿದಿರುವುದಿಲ್ಲವಲ್ಲ!

ಪೇಂಟರ್ ಪಾಪು, ಸಂತೇಮರಹಳ್ಳಿ
*ಐದು ನಿಮಿಷದ ಕೋಪ ಐವತ್ತು ವರ್ಷದ ಸಂಬಂಧವನ್ನು ಮುರಿದು ಬೀಳಿಸುತ್ತದೆಯಲ್ಲಾ, ಯಾಕೆ?*
ಸಂಬಂಧ ಹಾಲು, ಕೋಪ ಹುಳಿ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಹುಡುಗರು ಚುಡಾಯಿಸುತ್ತಾರೆಂದು ದೂರುವ ಹುಡುಗಿಯರು ಪ್ರಚೋದಕ ಉಡುಪುಗಳನ್ನು ಧರಿಸುವುದು ತರವೇ?*



ಚೆಲುವು ನೋಡುಗನ ಕಣ್ಣಿನಲ್ಲಿ, ಕಾಮ ನೋಡುಗನ ಮನದಲ್ಲಿ ಇರುವಾಗ ಮೈಭರ್ತಿ ಕಂಬಳಿ ಹೊದ್ದರೂ ಶಿಳ್ಳೆ ತಪ್ಪದು ಪುಟ್ಟ!

ಬಿ.ಎನ್. ಸೊಲ್ಲಾಪುರ, ಬೀದರ್
*ಹಿಂದೂ ಹೂಗಾರ ಬರೆದರೆ 2ಎ ಕೆಟಗರಿ, ಲಿಂಗಾಯತ ಹೂಗಾರ ಬರೆದರೆ 3 ಬಿ ಕೆಟಗರಿ. ಇದು ವಿವೇಕವಂತರ ಕೆಲಸವೆ?*
ಜಾತಿರೋಗಕ್ಕಿಂತ ಅವಿವೇಕವಿಲ್ಲ. ಬಡತನವೊಂದೇ ಮೀಸಲಾತಿಗೆ ಆಧಾರವಾದರೆ ಮಾತ್ರ ಈ ಮೇಲು ಕೀಳೆಲ್ಲಾ ತೊಲಗಲು ಸಾಧ್ಯ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಪ್ರತಿದಿನ ನನ್ನ ಅಪ್ಪಿ ಮುದ್ದಾಡಬೇಕು. ಹಾಗಿದ್ದರೆ ಮಾತ್ರ ನಿನ್ನನ್ನು ಮದುವೆ ಆಗ್ತೀನಿ ಅಂತಾಳೆ?*
ಯಾರಂತೆ ಆ ಅಪ್ಪಿ? ಯಾರನ್ನು ಮುದ್ದಾಡಬೇಕಂತೆ? ಸರಿಯಾಗಿ ವಿಚಾರ ತಿಳಿದು ನಂತರ ಮದುವೆಯಾಗಿ.

■ ರಾಮ್